1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 127/2022

ದಿನಾಂಕ ಃ 02.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಗಿದೆ.
ಸಿ. ಡಬ್ಲ್ಯೂ: 27 ಪಿ. ಡಬ್ಲ್ಯೂ:22

| | |
|---|---|
| ಸಾಕ್ಷಿದಾರರ ಹೆಸರು | ಮಧು |
| ತಂದೆಯ ಹೆಸರು | ನಂಜುಂಡೇಗೌಡ |
| ವಯಸ್ಸು | 29 ವರ್ಷ |
| ಉದ್ಯೋಗ | ಫೋಟೋಗ್ರಾಫರ್, ಮಳವಳ್ಳಿ |
| ವಾಸ | ಹುಲ್ಲೇಗಾಲ, ಮಳವಳ್ಳಿ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಸಾಕ್ಷಿಗೆ ಕಲಂ.65 (ಬಿ) ಭಾರತೀಯ ಸಾಕ್ಷ್ಯ ಅಧಿನಿಯಮದ ಪ್ರಮಾಣ ಪತ್ರವನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪ್ರಮಾಣ ಪತ್ರವನ್ನು ನಿಪಿ.48 ಎಂದು, ಸಾಕ್ಷಿಯ ಸಹಿಯನ್ನು ನಿಪಿ.48(ಎ) ಎಂದು ಗುರುತಿಸಲಾಯಿತು.
2. 8 ರಿಂದ 10 ವರುಷಗಳಿಂದ ಸೌಮ್ಯ ಸ್ಟುಡಿಯೋ ಎಂಬ ಹೆಸರಿನಲ್ಲಿ ಮಳವಳ್ಳಿಯಲ್ಲಿ ಸ್ಟುಡಿಯೋ ಅಂಗಡಿ ನಡೆಸುತ್ತಿದ್ದೇನೆ.
3. ಫ್ರಾಸಾ.2 ರವರು ಪೊಲೀಸ್ ಠಾಣೆಯಲ್ಲಿ ತನ್ನ ಒಡವೆಗಳನ್ನು ಪಡೆದುಕೊಳ್ಳಬೇಕಾಗಿದೆ ಎಂದು, ಫೊಟೋ ತೆಗೆದುಕೊಡಬೇಕಾಗಿದೆ ಎಂದು ನನ್ನನ್ನು ಪೊಲೀಸ್ ಠಾಣೆಗೆ ಕರೆದಿದ್ದರು. ಅದರಂತೆ ನಾನು ಮಳವಳ್ಳಿ ಪೊಲೀಸ್ ಠಾಣೆಗೆ ಹೋಗಿದ್ದೆನು. ಪೊಲೀಸ್ ಠಾಣೆಯಲ್ಲಿ ಒಡವೆಗಳನ್ನು ಇರಿಸಿದ್ದರು, ಅಲ್ಲಿ ಪೊಲೀಸರು ಫೋಟೋ ತೆಗೆಯಲು ಸೂಚಿಸಿದಂತೆ ನಾನು, ಫೋಟೋ ತೆಗೆದಿರುತ್ತೇನೆ.
4. ಸಾಕ್ಷಿಗೆ ನಿಪಿ.12 ರಿಂದ 15 ಫೋಟೋಗಳನ್ನು ತೋರಿಸಲಾಗಿ, ಸದರಿ ನಿಪಿ.13 ರಿಂದ 15 ಫೋಟೋಗಳಲ್ಲಿ ಇರುವ ಪೊಲೀಸ್ ಅಧಿಕಾರಿಯವರು ಫೋಟೋ ತೆಗೆಯಬೇಕು ಎಂದು ಸೂಚಿಸಿದ್ದರು ಎಂದು ಸಾಕ್ಷಿಯು ನಿಪಿ.12 ರಿಂದ 15 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

5. ನನ್ನ ಬಳಿ ನಿಕಾನ್ D750 ಕ್ಯಾಮರಾ ಇತ್ತು, ಸದರಿ ಕ್ಯಾಮರಾದಿಂದ ನಿಪಿ.12 ರಿಂದ 15 ಫೋಟೋಗಳನ್ನು ತೆಗೆದಿರುತ್ತೇನೆ.
6. ಸದರಿ ನಿಪಿ.12 ರಿಂದ 15 ಫೋಟೋಗಳನ್ನು 2022 ನೇ ಸಾಲಿನಲ್ಲಿ ತೆಗೆದಿರುತ್ತೇನೆ, ದಿನಾಂಕ ಖಚಿತವಾಗಿ ನೆನಪಿಲ್ಲ.

**<u>ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಎನ್ ಕೆ ಎಸ್ ವಕೀಲರಿಂದ ಃ</u>**

7. 2022 ರ ಯಾವ ತಿಂಗಳಲ್ಲಿ ಸದರಿ ನಿಪಿ.12 ರಿಂದ 15 ಫೋಟೋಗಳನ್ನು ತೆಗೆದಿದ್ದೆನು ಎಂದು ನನಗೆ ನೆನಪಿಲ್ಲ. ಸದರಿ ಫ್ರಾಸಾ. 2 ರವರು ನನಗೆ ಮೊದಲು ಪರಿಚಯ ಇರಲಿಲ್ಲ. ಸದರಿ ನಿಪಿ.12 ರಿಂದ 15 ಫೋಟೋಗಳನ್ನು ಕ್ಯಾಮರಾದಿಂದ ತೆಗೆದ ಮರುದಿನ ಸದರಿ ನಿಪಿ.12 ರಿಂದ 15 ಫೋಟೋಗಳನ್ನು ಪ್ರಿಂಟ್ ಮಾಡಿ ಪೊಲೀಸರಿಗೆ ನೀಡಿರುತ್ತೇನೆ. ನಿಪಿ.48 ನ್ನು ಪೊಲೀಸರಿಗೆ ನೀಡಿದ ಸಮಯದಲ್ಲಿ ನಾನು ಪೋಟೋ ತೆಗೆಯಲು ಉಪಯೋಗಿಸಿದ್ದ ಕ್ಯಾಮರಾವನ್ನು ಪೊಲೀಸರು ಪರಿಶೀಲನೆ ಮಾಡಿದ್ದರು. ಸದರಿ ಕ್ಯಾಮರಾದಿಂದ ನನ್ನ ಕಂಪ್ಯೂಟರ್ ಸಿಸ್ಟಮ್ ಗೆ ನಿಪಿ.12 ರಿಂದ 15 ಫೋಟೋಗಳನ್ನು ಡೌನ್ ಲೋಡ್ ಮಾಡಿಕೊಂಡು ಪ್ರಿಂಟ್ ತೆಗೆದುಕೊಂಡಿರುತ್ತೇನೆ. ಸದರಿ ನಾನು ಡೌನ್ ಲೋಡ್ ಮಾಡಿಕೊಂಡ ಕಂಪ್ಯೂಟರ್ ಸಿಸ್ಟಮ್ ನ identification number ಹಾಗೂ software details ನ್ನು ಕೇಳಿಲ್ಲ. ಸಾಮಾನ್ಯವಾಗಿ ಫೋಟೋಗಳನ್ನು ಕಂಪ್ಯೂಟರ್ ಸಿಸ್ಟಮ್ ಗೆ ಡೌನ್ ಲೋಡ್ ಮಾಡಿಕೊಂಡಾಗ ಸದರಿ ಫೋಟೋಗಳ brightness, contrast ನ್ನು ಹೆಚ್ಚು ಕಡಿಮೆ ಮಾಡಬಹುದು ಎಂದರೆ ಸರಿ.
8. ಫೋಟೋಗಳನು ಪೊಲೀಸ್ ಠಾಣೆಯಲ್ಲಿ ತೆಗೆಯುವ ಮೊದಲು ನನ್ನ ಕ್ಯಾಮೆರಾವನ್ನು ಪರಿಶೀಲನೆ ಮಾಡಿದ್ದರು. ಸದರಿ ಫೋಟೋಗಳನ್ನು ಪೊಲೀಸ್ ಠಾಣೆಗೆ ಹಾಜರಿಸಿದ ದಿನ ನನ್ನ ಸಹಿಯನ್ನು ಪೊಲೀಸರು ಪಡೆದುಕೊಂಡಿಲ್ಲ. ಸಾಕ್ಷಿಯು ಮುಂದುವರೆದು, ನಾನು ಫೋಟೋದ ಪ್ರಿಂಟ್ ನ್ನು ಹಾಕಿ ಸ್ಟುಡಿಯೋದಲ್ಲಿ ಇಟ್ಟಿದ್ದೆನು, ಅದನ್ನು ಪೊಲೀಸರು ಬಂದು ತೆಗೆದುಕೊಂಡು ಹೋಗಿದ್ದರು ಎಂದು ನುಡಿಯುತ್ತಾರೆ.

**<u>ಮರು ವಿಚಾರಣೆಃ</u> ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.